ಏಕೆಂದರೆ ಬಾಂಧವ್ಯ ನಮ್ಮನ್ನು ಬೆಳೆಸುತ್ತದೆ, ಬದುಕಿಸುತ್ತದೆ.

◆ **ನಿಮ್ಮ ಪ್ರಕಾರ 'ರಾಜಕೀಯ ಪ್ರಜ್ಞೆ' ಅಂದ್ರೇನು?**

ಇವತ್ತಿನ ದಿನ ನಾವು ರಾಜಕೀಯದಲ್ಲಿ ಮಾತ್ರ ನೇರವಾಗಿ ಭಾಗವಹಿಸಬೇಕಾಗಿಲ್ಲ. ನಾವು ಈಗಾಗಲೇ ಅದರ ಭಾಗವಾಗಿದ್ದೇವೆ, ನಾವು ಪರಸ್ಪರ ಪ್ರಭಾವಿತರಾಗಿದ್ದೇವೆ. ಮಹಿಳೆಯರ ಸುತ್ತ ರಾಜಕೀಯ, ಮಹಿಳೆಯರನ್ನು ಗುರಿಯಾಗಿಸಿಕೊಂಡು ರಾಜಕೀಯ, ಮಹಿಳೆಯರು ಭಾಗವಹಿಸಲು ಸಾಧ್ಯವಾಗದ ರಾಜಕೀಯ... 'ಅದು' ನಮ್ಮ ಬೆಡ್ರೂಮಿನಿಂದ ಹಿಡಿದು ಬೀದಿಯ ತನಕ ಬೆಳೆದು ನಿಂತಿದೆ.

ಏಷ್ಯಾದ ಎಲ್ಲ ದೇಶಗಳಂತೆ ಶ್ರೀಲಂಕಾದಲ್ಲಿ ಯಾವುದೇ ರಾಜಕೀಯ ಸಂಬಂಧವನ್ನು ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಸಾಧ್ಯವಾಗದೆ ತುದಿಗಾಲಲ್ಲಿ ನಿಂತಿದ್ದೇನೆ. ಕೊನೆಗೂ 'ಇದು' ನನ್ನ ವ್ಯಕ್ತಿತ್ವವನ್ನು ನಿಮ್ಮೆದುರಿಗೆ ತೆರೆದಿಡುವ, ನನ್ನ ಅಭಿಪ್ರಾಯ ಮಂಡಿಸುವ ಸಹಜ ಗುಣವಾಗಿದೆ.

◆ **ಮಿಜ್ರಾ, ಇದಕ್ಕೆ ಉತ್ತರ ಕೊಡಲೇಬೇಕಂತಿಲ್ಲ ಸುಮ್ಮನೆ ಕೇಳುವೆ. ಕೊನೆಯ ಸಲ ನೀವು ಅತ್ತಿದ್ದು ಯಾವಾಗ? ಮರಣಕ್ಕಿಂತ ದೊಡ್ಡ ಕೂಗು ಇದೆಯೇ?**

ಜಗತ್ತಿನಲ್ಲಿ ಯಾವುದು ಶಾಶ್ವತ ಎಂಬ ಸರಳ ಪ್ರಶ್ನೆಗೆ ಮರಣಕ್ಕಿಂತ ಹೆಚ್ಚು ಖಚಿತವಾದ ಉತ್ತರವಿದೆಯೇ?

ಪ್ರತಿಯೊಂದು ಆತ್ಮವು ಜನನ ಮರಣದ ರುಚಿ ನೋಡಲೇಬೇಕು.

◆ **ಉತ್ತರ ತುಂಬಾ ಫಿಲೋಸೊಫಿಕಲ್ ಆಯ್ತು (ನಾನು ನಗುತ್ತಾ ಹೇಳಿದೆ) ಹೌದಾ? ಹಾಗನ್ನುತ್ತಾ? (ನಗು)**



## ಮಿಜ್ರಾ ಜಬ್ಬಾರ್ ಕವಿತೆಗಳು

# ವಿನ್ಸೆಂಟ್ ವ್ಯಾನ್ಗೋನ ಬಣ್ಣದ ಬಟ್ಟಲುಗಳಿಂದ...

ವ್ಯಾನ್ಗೋನ ಬಣ್ಣದ ಬಟ್ಟಲುಗಳಿಂದ
ಕಾಮದ ಹನಿಗಳು ತೊಟ್ಟಿಕ್ಕುತ್ತಲೇ ಇರುತ್ತವೆ...

ಅಲ್ಲಿ
ಅನಂತತೆಯನ್ನು ಕುಟುಕುವ ಚಳಿಗಾಲದಂತೆ
ಸೃಷ್ಟಿಯು
ಖಿನ್ನವಾಗುವುದು ಮತ್ತೆ ರಂಗೇರುವುದು

ಭಾವುಕರನು
ಅತೀ ಭಾವುಕಗೊಳಿಸುವ
ಮೋಹಕ ನೀಲಿಯು
ತನ್ನ ಬಣ್ಣಬಿಡುತ್ತಾ
ಭುವಿ ಬಾನು ಸೇರಿ
ಕತ್ತಲಾವರಿಸುವಲ್ಲಿ
ಈ ದಿಗಂತದ ಒಂಟಿತನಕ್ಕಾಗಿ
ಮತ್ತಷ್ಟು ಕರಗುತ್ತಾ

ಎಣೆಯಿಲ್ಲದಂತೆ
ಕ್ಷಣವೊಂದರ ಬಿಂದುವಿನಲಿ
ನೋಟವ ನಿಲ್ಲಿಸಿ
ಎರಡು ಸಂವತ್ಸರಗಳ ಕಾಲ
ಚಿತ್ತಗೆಡದಿರಬಲ್ಲದೆ?